# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬**

**ದಿನಾಂಕ: 19–08–2022 ರಂದು** ಸಂಜೆ **4:00 ಗಂಟೆಗೆ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 22ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ.

| | |
|---|---|
| **ಉಪಸ್ಥಿತರು** | |
| **ಡಾ. ವಿದ್ಯಾಶಂಕರ್. ಎಸ್.**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಕುಲಸಚಿವರು (ಕಾ/ಭಾ) ಮತ್ತು<br>ಹಣಕಾಸು ಅಧಿಕಾರಿಗಳು ಕರಾಮುವಿ, ಮೈಸ್ರರು. |
| **ಪ್ರೆ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ)<br>ಕ್ಪರಾಮುವಿ, ಮೈಸ್ರರು | **ಡಾ. ಕೆ.ಬಿ. ಪ್ರವೀಣ**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು. |
| **ಪ್ರೊ. ಎಂ. ರಾಮನಾಥಂ ನಾಯ್ಡು**<br>ಡೀನ್ (ಅಧ್ಯಯನ ಕೇಂದ್ರಗಳು),<br>ಕರಾಮುವಿ, ಮೈಸೂರು. | |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>CIQA **ನಿರ್ದೇಶಕರು**<br>ಕರಾಮುವಿ, ಮೈಸೂರು. | **ಡಾ. ಹೆಚ್. ರಾಜೇಶ್ವರಿ**<br>**ವಿಶೇಷಾಧಿಕಾರಿ –** ಡೀನ್ (ಶೈಕ್ಷಣಿಕ)<br>ಕರಾಮುವಿ, ಮೈಸೂರು. |
| **ವಿವಿಧ ನಿಕಾಯಗಳ (ಸ್ಕೂಲ್) ಪ್ರಭಾರ ನಿರ್ದೇಶಕರು** | |
| **ಪ್ರೊ. ರಾಮನಾಥಮ್ ನಾಯ್ಡು ಎಂ.** | **ಭಾಷಾ ನಿಕಾಯ** |
| **ಡಾ. ಆರ್.ಹೆಚ್. ಪವಿತ್ರ** | **ಸಮಾಜ ವಿಜ್ಞಾನ ನಿಕಾಯ** |
| **ಡಾ. ಲಕ್ಷ್ಮೀ .ಎನ್** | **ಶಿಕ್ಷಣ ನಿಕಾಯ** |
| **ಡಾ. ಮಹೇಶ ವಿ.** | **ವಾಣಿಜ್ಯ ನಿಕಾಯ** |
| **ಡಾ. ಹೆಚ್. ರಾಜೇಶ್ವರಿ** | **ನಿರ್ವಹಣಾಶಾಸ್ತ್ರ ನಿಕಾಯ** |
| **ಡಾ. ನಿರಂಜನ್ ರಾಜ್ ಎಸ್.** | **ವಿಜ್ಞಾನ ನಿಕಾಯ** |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಸಚಿವರು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಸಚಿವರು ಮಾತನಾಡುತ್ತಾ, 22ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ವಿಶೇಷಾಧಿಕಾರಿಗಳು ಡೀನ್ (ಶೈಕ್ಷಣಿಕ) ಅವರಿಗೆ ಸೂಚಿಸಿದರು.

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 22.01

**ವಿಷಯ :** 2022–23ನೇ ಸಾಲಿನ July Cycle ಆವೃತ್ತಿಯ ವಿವರಣಾ ಪುಸ್ತಕಗಳನ್ನು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸುವ ಬಗ್ಗೆ.

****

2022–23ನೇ ಸಾಲಿನ July Cycle ಆವೃತ್ತಿಯ ಪ್ರವೇಶಾತಿ ಪ್ರಾರಂಭಿಸುವ ಸಲುವಾಗಿ ಈ ಕೆಳಕಂಡ ಕೋರ್ಸ್‌ಗಳ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಲು ಕಛೇರಿ ಸಂಖ್ಯೆ : ಕರಾಮುವಿ/ಡೀನ್(ಶೈ)–07/2021–22 ದಿನಾಂಕ: 01–01–2022 ರ ಪ್ರಕಾರ ಅಧ್ಯಾಪಕರ ಸಮಿತಿಯನ್ನು ರಚಿಸಿ ಕಚೇರಿ ಆದೇಶ ಹೊರಡಿಸಲಾಗಿತ್ತು. ಪ್ರಸ್ತುತ, ಸದರಿ ಸಮಿತಿಯು ವಿ.ವಿ.ಯ ಆಯಾಯ ಕೋರ್ಸ್‌ಗಳ ಅಧ್ಯಾದೇಶಗಳು ಮತ್ತು UGC ನಿಯಾಮವಳಿಯ ಪ್ರಕಾರ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಿ ಸಲ್ಲಿಸಲಾಗಿದ್ದು, ಈ ಸಂಬಂಧ ವಿವಿಯ ಪ್ರವೇಶಾತಿ ವಿಭಾಗ, ಪರೀಕ್ಷಾ ವಿಭಾಗ, ಡೀನ್ (ಅ.ಕೇ) ಹಾಗೂ ಎಲ್ಲಾ ಅಧ್ಯಯನ ವಿಭಾಗಗಳಿಂದಲೂ ತಿದ್ದುಪಡಿ ಮಾಡಿ ದೃಢೀಕರಿಸಿ ಸಲ್ಲಿಸಿರುವ ವಿವರಣಾ ಪುಸ್ತಕಗಳನ್ನು ಈಗಾಗಲೇ ಪ್ರವೇಶಾತಿ ಪ್ರಕ್ರಿಯೆಗಾಗಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ (**www.ksoumysuru.ac.in**) ನಲ್ಲಿ ಪ್ರಕಟಿಸಲಾಗಿದೆ ಮತ್ತು ಪ್ರವೇಶಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

**ಪ್ರಕಟಿಸಲಾಗಿರುವ ವಿವರಣಾ ಪುಸ್ತಕಗಳ ವಿವರ :**

1. **B.A, B.Com, B.Lib.I.Sc, (Non- CBCS)**
2. **B.B.A (Marketing Management), B.Sc (General), B.Sc (Home Science), B.Sc (Information Technology) and B.C.A Programmes (CBCS)**
3. **M.A CBCS:** (Kannada, English, Hindi, Telugu, Education, History, Economics, Political Science, Sociology, Ancient History and Archeology).
4. **M.A Non CBCS:** (Sanskrit, Urdu, Public Administration, Journalism and Mass Communication).
5. **M.Com** Programme (CBCS)
6. **M.Sc.:** (Bio-Chemistry, Bio-Technology, Chemistry, Clinical Nutrition and Dietetics, Environmental Science, Computer Science, Geography, Information Technology, Mathematics, Micro Biology, Physics, Psychology, Botany, Zoology, Food and Nutrition Science)
7. **M.Lib.I.Sc** Programme (CBCS)
8. **MBA** Programme (CBCS)
9. **Diploma Programmes :** [Diploma in Kannada (DIK), Diploma in Journalism (DIJ), Diploma in Nutrition and Health Education (DNHE), Diploma in Information Technology (DIT), Diploma in Computer Application (DCA), Diploma in Early Chilhood Care & Education (DECCE)]
10. **Post – Graduation Certificate Programmes:** [Post Graduate Certificate in English (PGCE), Post Graduate Certificate in Communicative English (PGCCE), Post Graduate Certificate in Human Resource Management (PGCHRM), Post Graduate Certificate in Financial Management (PGCFM), Post Graduate Certificate in Business Administration (PGCBA), Post Graduate Certificate in Marketing Management (PGCMM), Post Graduate Certificate in Nutrition and Deities (PGCND), Post Graduate Certificate in Journalism and Mass Communication (PGCJMC), Post Graduate Certificate in Kuvempu Sahithya (PGCKS), Post Graduate Certificate in Business Law (PGCBL), Post Graduate Certificate in Information Technology (PGCIT), Post Graduate Certificate in Computer Application (PGCCA), Post Graduate Certificate in Ambedkar Studies (PGCAS)]
11. **Under Graduation Certificate Programmes:** [Certificate in Panchayath Raj (UGCPR), Certificate in Nutrition and Food (UGCNF), Certificate in Information Communication Technology (UGCICT), Certificate in English, Employment & Entreneurship]

ಸದರಿ ವಿವರಣಾ ಪುಸ್ತಕಗಳನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

<u>ತೀರ್ಮಾನ</u>

**ಅನುಸಮರ್ಥನೆಗೊಳಿಸಲಾಯಿತು, ಮುಂದುವರೆದು ಮುಂದಿನ ಶೈಕ್ಷಣಿಕ ಮಂಡಳಿಯಲ್ಲಿ ವಿವರಣಾ ಪುಸ್ತಕಗಳನ್ನು ಅನಮೋದನೆಗೆ ಮಂಡಿಸುವಾಗ ಇದಕ್ಕಾಗಿ ರಚಿಸಿರುವ ಸಮಿತಿಯ ಆದೇಶ ಹಾಗೂ ನಡಾವಳಿಗಳನ್ನು ಸಲ್ಲಿಸಬೇಕು.**

## ವಿಷಯ ಸಂಖ್ಯೆ: 22.02

**ವಿಷಯ** : ಪ್ರೊ. ಎನ್. ಲಕ್ಷ್ಮಿ, ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಇವರಿಗೆ Sabbatical Leave ಮಂಜೂರು ಮಾಡುವ ಬಗೆಗೆ.

* * * * *

ಪ್ರೊ. ಎನ್. ಲಕ್ಷ್ಮಿ, ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಇವರು ಪ್ರಸ್ತುತ ರಾಷ್ಟ್ರೀಯ ಶಿಕ್ಷಣ ನೀತಿ-2020ನ್ನು ಅಳವಡಿಸಿಕೊಳ್ಳುವ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೈಕ್ಷಣಿಕ ವರ್ಷ 2023-24ನೇ ಸಾಲಿನಿಂದ ನಾಲ್ಕು ವರ್ಷಗಳ ಸಂಯೋಜಿತ ಶಿಕ್ಷಕರ ಶಿಕ್ಷಣ ಕಾರ್ಯಕ್ರಮ (ITEP) ವನ್ನು ಪ್ರಾರಂಭಿಸಲು ಕೇಂದ್ರ ಹಾಗೂ ರಾಜ್ಯ ವಿಶ್ವವಿದ್ಯಾನಿಲಯಗಳಿಗೆ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಬಿ.ಎ., ಬಿ.ಇಡಿ., ; ಬಿ.ಎಸ್ಸಿ., ಬಿ.ಇಡಿ., ಮತ್ತು ಬಿ.ಕಾಂ., ಬಿ.ಇಡಿ., ಕೋರ್ಸ್‌ಗಳ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ಸದುಪಯೋಗಕ್ಕಾಗಿ 'ಮಾರ್ಗದರ್ಶನ ಮತ್ತು ಸಲಹೆ' (Guidence and Councelling) ಎಂಬ ಪುಸ್ತಕವನ್ನು ಬರೆಯುವ ಸಂಬಂಧ ಒಂದು ವರ್ಷಗಳ ಅವಧಿಗೆ Sabbatical Leave ಮಂಜೂರು ಮಾಡುವಂತೆ ಕೋರಿ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

Sabbatical Leave ಮಂಜೂರು ಮಾಡುವ ಸಂಬಂಧ ವಿಶ್ವವಿದ್ಯಾನಿಲಯವು ತನ್ನದೇ ಆದ ಪರಿನಿಯಮವನ್ನು ರಚಿಸಿಕೊಂಡಿರುತ್ತದೆ. ಸದರಿ ಪರಿನಿಯಮದಲ್ಲಿ "To encourage permanent teachers to undertake study or research or other academic pursuit solely for the object of increasing their proficiency and usefulness to the University and higher education system, Sabbatical leave is provided to the teachers on Condition" ಎಂದಿರುತ್ತದೆ ಹಾಗೂ ಸಬಾಟಿಕಲ್ ರಜೆಯನ್ನು ಮಂಜೂರು ಮಾಡುವ ಸಂಬಂಧದ ನಿಯಮಗಳನ್ನು ವಿವರಿಸಲಾಗಿರುತ್ತದೆ.

ಯು.ಜಿ.ಸಿ. ಮಾರ್ಗಸೂಚಿ-2018ರಲ್ಲಿಯೂ ಸಹ ವಿಶ್ವವಿದ್ಯಾನಿಲಯದ ಖಾಯಂ ಪ್ರಾಧ್ಯಾಪಕರು ಹಾಗೂ ಸಹ ಪ್ರಾಧ್ಯಾಪಕರುಗಳಿಗೆ Sabbatical Leave ಮಂಜೂರು ಮಾಡಲು ಅವಕಾಶವಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಶೈಕ್ಷಣಿಕ ಮಂಡಳಿ ಗಮನಕ್ಕೆ ತರುತ್ತಾ ಡಾ. ಎನ್. ಲಕ್ಷ್ಮಿ ಇವರಿಗೆ Sabbatical Leave ಮಂಜೂರು ಮಾಡುವ ಸಂಬಂಧ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

<u>**ಚರ್ಚೆ:**</u>

**ಡೀನ್ (ಶೈ) ಅವರು ಮಾತನಾಡಿ SLM Pending ಅಲ್ಲದೆ NAAC Pending ಹಾಗೂ ಪರಿನಿಯಮದ ಪ್ರತಿಯನ್ನು ಪರಿಶೀಲಿಸಬೇಕು ಎಂದು ಚರ್ಚಿಸಲಾಯಿತು.**

<u>**ತೀರ್ಮಾನ**</u> **:**

**ಕರಾಮುವಿ ನಿಲಯದ ನಿಯಮಾನುಸಾರ ಸದರಿ ಪ್ರಾಧ್ಯಾಪಕರಿಗೆ Sabatical Leave ಮಂಜೂರು ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ವಹಿಸಲಾಯಿತು.**

## ವಿಷಯ ಸಂಖ್ಯೆ: 22.03

ವಿಷಯ : ವಿಶ್ವವಿದ್ಯಾನಿಲಯದಲ್ಲಿ ನ್ಯಾಕ್ ಮಾನ್ಯತೆ ಪಡೆಯುವ ಸಂಬಂಧ ವಿವಿಧ Stake Holders ಗಳಿಂದ feed Back ಗಳನ್ನು ಪಡೆಯಲು ವಿವಿಧ ನಮೂನೆಗಳನ್ನು ವಿಶ್ವವಿದ್ಯಾನಿಯದ ಅಂರ್ತಜಾಲದಲ್ಲಿ ಈಗಾಗಲೆ ಗಿಣಟಂಚಿಜ ಮಾಡಲಾಗಿರುವ ಬಗೆಗೆ.

******

ವಿಶ್ವವಿದ್ಯಾನಿಲಯದಲ್ಲಿ ನ್ಯಾಕ್ ಮಾನ್ಯತೆ ಪಡೆಯುವ ಸಂಬಂಧ ವಿವಿಧ Stake Holders ಗಳಿಂದ feed Back ಗಳನ್ನು ಪಡೆಯಲು ವಿವಿಧ ನಮೂನೆಗಳನ್ನು ವಿಶ್ವವಿದ್ಯಾನಿಯದ ಅಂರ್ತಜಾಲದಲ್ಲಿ ಈಗಾಗಲೆ Upload ಮಾಡಲಾಗಿರುತ್ತದೆ. ಅದರನ್ವಯ ಸಂಬಂಧಿಸಿದ Stake Holder ಗಳು ಮಾಹಿತಿಯನ್ನು ನಿಗದಿತ ನಮೂನೆಗಳಲ್ಲಿ ಭರ್ತಿಮಾಡಿ ಸಲ್ಲಿಸಲಾಗಿದ್ದು, ಸದರಿ ಎಲ್ಲಾ Feed Back ಗಳನ್ನು ವಿಶ್ಲೇಷಿಸಲಾಗಿದ್ದು, ಅವುಗಳ ವಿಸ್ತ್ರತ ವರದಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

Feed Back ವರದಿಯನ್ನು ಒಪ್ಪಲಾಯಿತು.

## ವಿಷಯ ಸಂಖ್ಯೆ: 22.04

**ವಿಷಯ:– ಪರೀಕ್ಷಾ ವಿಭಾಗದ ವಿದ್ಯಾರ್ಥಿಗಳ ಕುಂದುಕೊರತೆಗಳ ಸಲಹಾ ಸಮಿತಿ ಸಭೆಯ ನಡವಳಿಯನ್ನು ಮುಂದಿನ ಶೈಕ್ಷಣಿಕ ಮಂಡಳಿ ಸಭೆಯ ಒಪ್ಪಿಗೆ ಕೋರಿ ಮಂಡಿಸುತ್ತಿರುವ ಬಗೆಗೆ.**

***

ಪರೀಕ್ಷಾ ವಿಭಾಗದ ಸ್ನಾತಕ ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ನಿವಾರಿಸುವ ಸಲುವಾಗಿ ದಿನಾಂಕ:12.11.2021ರಂದು ವಿದ್ಯಾರ್ಥಿಗಳ ಕುಂದುಕೊರತೆಗಳ ಸಲಹಾ ಸಮಿತಿ ಸಭೆಯಲ್ಲಿ ಮಂಡಿಸಲಾಗಿತ್ತು, ಅದರಂತೆ ಸಲಹಾ ಸಮಿತಿಯು ನೀಡಿದ್ದ ನಿರ್ಣಯದ ನಡವಳಿಯನ್ನು ದಿನಾಂಕ:15–11–2021ರಂದು ನಡೆದ 58ನೇ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಲಾಗಿತ್ತು, ಸದರಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ಹಾಗೂ ಪರಿಶೀಲಿಸಿ, ಮಂಡಿಸಿರುವ ವರದಿಯಲ್ಲಿ ಇನ್ನು ಹೆಚ್ಚಿನ ಸ್ಪಷ್ಟತೆಯ ಅವಶ್ಯಕತೆಯಿರುವುದರಿಂದ ಪೂರ್ಣ ಮಾಹಿತಿಯೊಂದಿಗೆ ಮುಂದಿನ ಶೈಕ್ಷಣಿಕ ಮಂಡಳಿ ಸಭೆಗೆ ಮರುಮಂಡಿಸಲು ಸೂಚಿಸಲಾಗಿತ್ತು. ಅದರಂತೆ ದಿನಾಂಕ:02–02–2022ರಂದು ನಡೆದ ಸಲಹಾ ಸಮಿತಿ ಸಭೆಯಲ್ಲಿ ಸ್ನಾತಕ 18 ವಿಷಯಗಳನ್ನು ಮತ್ತೊಮ್ಮೆ ಪರಿಷ್ಕರಿಸಿ ಚರ್ಚೆ ಮತ್ತು ನಿರ್ಣಯದ ನಡವಳಿಯನ್ನು 20ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆ ಮತ್ತು 167ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯಲಾಗಿತ್ತು. ಸದರಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಷಯಗಳ ಚರ್ಚೆ ಮತ್ತು ತೀರ್ಮಾನಗಳನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಮಾನ್ಯ ಕುಲಪತಿಗಳು ಅವಗಾಹಿಸಿ ಪ್ರಸ್ತಾಪಿತ ತೀರ್ಮಾನಗಳು ಸಮಂಜಸವಾಗಿರುವುದಿಲ್ಲವೆಂದು ವಿದ್ಯಾರ್ಥಿಗಳ

ಅಂಕಪಟ್ಟಿ ತಿದ್ದುಪಡಿಗೆ ಸಂಬಂಧಿಸಿದಂತೆ ಮತ್ತೊಮ್ಮೆ ಸಲಹಾ ಸಮಿತಿಯಲ್ಲಿ ಮಂಡಿಸಿ, ಸದರಿ ವಿಷಯಗಳನ್ನು ಪುನರ್ ಪರಿಶೀಲಿಸಿ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಉನ್ನತಿ ಮತ್ತು ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ತೀರ್ಮಾನಗಳನ್ನು ಕೈಗೊಳ್ಳಲು ಕ್ರಮವಹಿಸುವಂತೆ ಮೌಖಿಕವಾಗಿ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ, ದಿನಾಂಕ:15.06.2022ರಂದು "ವಿದ್ಯಾರ್ಥಿಗಳ ಕುಂದುಕೊರತೆಗಳ ಸಲಹಾ ಸಮಿತಿ"ಯಲ್ಲಿ ವಿಷಯವನ್ನು ಮರು ಮಂಡಿಸಿದ್ದು ಸದರಿ ಸಮಿತಿಯ ಎಲ್ಲಾ ಸದಸ್ಯರುಗಳು ಮತ್ತೊಮ್ಮೆ ಪುನರ್ ಚರ್ಚಿಸಿ ಹಾಗೂ ಪರಿಶೀಲಿಸಿ 09 ವಿಷಯಗಳಿಗೆ ಸಂಬಂಧಿಸಿದಂತೆ ಸಮಿತಿಯು ತೆಗೆದುಕೊಂಡಿರುವ ನಿರ್ಣಯದ ನಡವಳಿಯನ್ನು ಮುಂದಿನ ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನ ಮತ್ತು ಅನುಮೋದನೆಗಾಗಿ ವಿಷಯವನ್ನು ಮರು ಮಂಡಿಸಿದೆ.

ಮುಂದುವರೆದು ದಿನಾಂಕ:15.06.2022ರಂದು ನಡೆದ ಸಲಹಾ ಸಮಿತಿ ಸಭೆಯಲ್ಲಿ ಹೊಸದಾಗಿ ಉದ್ಭವಿಸಿದ್ದ 03 ಸ್ನಾತಕ ಪದವಿ ವಿದ್ಯಾರ್ಥಿಗಳ ವಿಷಯಗಳು ಹಾಗೂ 05 ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಸಮಿತಿಯು ತೆಗೆದುಕೊಂಡಿರುವ ನಿರ್ಣಯದ ನಡವಳಿಯನ್ನು ಮುಂದಿನ ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನ ಮತ್ತು ಅನುಮೋದನೆಗಾಗಿ ವಿಷಯ ಮಂಡಿಸಿದೆ.

ಚರ್ಚೆ :

**2012–13 ಸಾಲಿನವರೆಗೆ ಕರಾಮುವಿ ಜೊತೆ ಒಪ್ಪಂದ ಮಾಡಿಕೊಂಡಿದ್ದ ಅನೇಕ ಸಹಭಾಗಿತ್ವ ಸಂಸ್ಥೆಗಳು ಕರ್ನಾಟಕದ ಒಳಗೆ ವಿದ್ಯಾರ್ಥಿಗಳ ಪ್ರವೇಶಾತಿ ನೀಡಿ ಪರೀಕ್ಷೆ ನಡೆಸಿರುತ್ತಾರೆ. State Jurisdiction ಒಳಗಡೆ Collaboration Institution ಮೂಲಕ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪದವಿಯ ಮಾನ್ಯತೆ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಮಿತಿ ರಚಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಕುಲಪತಿಗಳು ಕುಲಸಚಿವ (ಪರೀಕ್ಷಾಂಗ) ರವರಿಗೆ ಸೂಚಿಸಿದರು.**

ತೀರ್ಮಾನ :

**ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ: 22.05

ವಿಷಯ : ಅಧ್ಯಯನ ಮಂಡಳಿ ಸಭೆಗಳ ಸಭಾ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಮತ್ತು ಅಧ್ಯಯನ ಪೀಠಗಳಲ್ಲಿ ಈ ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಅಧ್ಯಯನ ಮಂಡಳಿ ಸಭೆಗಳನ್ನು ನಡೆಸಲಾಗಿದ್ದು, ಸದರಿ ಅಧ್ಯಯನ ಮಂಡಳಿಯ ಸಭಾ ನಡಾವಳಿಗಳನ್ನು ಪ್ರಸ್ತುತ, ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಸಮರ್ಥನೆ ಪಡೆಯಬೇಕಾಗಿದೆ. ಹಾಗಾಗಿ, ಅನುಬಂಧದಲ್ಲಿರುವಂತೆ ಅಧ್ಯಯನ ಮಂಡಳಿ ಸಭೆಗಳ ವಿಷಯ ಮತ್ತು ತೀರ್ಮಾನಗಳನ್ನು ವಿಭಾಗವಾರು ಕ್ರೋಢೀಕರಿಸಿ ಪಟ್ಟಿ ಸಿದ್ದಪಡಿಸಿದೆ. ಸದರಿ ವಿಷಯವನ್ನು ಅನುಸಮರ್ಥನೆಗಾಗಿ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

ಅಂತಿಮವಾಗಿ 22ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಸಚಿವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

<u>ತೀರ್ಮಾನ</u> :

## <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>

## ವಿಷಯ ಸಂಖ್ಯೆ: 22.06

**ವಿಷಯ: ಶ್ರೀಮತಿ ಅಹಲ್ಯಾಬಾಯಿ ಹೋಳ್ಕರ್ ರವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಕರಾಮುವಿಯ ಕೇಂದ್ರ ಸ್ಥಾನದಲ್ಲಿ ಸ್ಥಾಪನೆ ಮಾಡಲು ಸಿದ್ಧಪಡಿಸಿರುವ ಪರಿನಿಯಮದ ಅನುಮೋದನೆ ಪಡೆಯುವ ಬಗ್ಗೆ.**

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ **ಶ್ರೀಮತಿ ಅಹಲ್ಯಾಬಾಯಿ ಹೋಳ್ಕರ್** ರವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸುವಂತೆ **59ನೇ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ದಿನಾಂಕ 20.05.2022** ರಂದು ತೀರ್ಮಾನಿಸಲಾಯಿತು. ಸದರಿ ವಿಷಯದ ಬಗ್ಗೆ **168ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ದಿನಾಂಕ 17.06.2022** ರಂದು ಸಭಾ ನಡವಳಿಯನ್ನು ಅನುಮೋದಿಸಿತು.

**ಶ್ರೀಮತಿ ಅಹಲ್ಯಾಬಾಯಿ ಹೋಳ್ಕರ್** ರವರ ಹೆಸರಿನಲ್ಲಿ ಕರಾಮುವಿ ನಿಲಯದಲ್ಲಿ ಪೀಠ ಸ್ಥಾಪಿಸುವ ಸಂಬಂಧ ಕರಡು ಪರಿನಿಯಮವನ್ನು ಸಿದ್ಧಪಡಿಸಲಾಗಿದ್ದು, ಸದರಿ ಪರಿನಿಯಮವನ್ನು ಮುಂಬರುವ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಅವಶ್ಯಕವಾಗಿರುತ್ತದೆ. ಅನುಮೋದನೆ ಪಡೆದ ನಂತರ ಸದರಿ ಪರಿನಿಯಮವನ್ನು ಸರ್ಕಾರದ ಮುಖಾಂತರ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸಲ್ಲಿಸಬೇಕಾಗಿದೆ. ಈ ವಿಷಯದ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಲಾಗಿದೆ.

<u>ತೀರ್ಮಾನ</u> :

**ವಿಷಯವನ್ನು ಅನುಮೋದಿಸಲಾಯಿತು ಮತ್ತು ಪೀಠಕ್ಕೆ ಸಂಬಂಧಿಸಿದಂತೆ ಕ್ರಿಯಾಯೋಜನೆಯನ್ನು ಅನುಮೊದಿಸಲಾಯಿತು.**

## ವಿಷಯ ಸಂಖ್ಯೆ: 22.07

ವಿಷಯ : ಹೊಸದಾಗಿ ಸ್ಥಾಪಿಸಲಾಗಿರುವ ಮೂರು ಅಧ್ಯಯನ ಪೀಠಗಳ ಪರಿನಿಯಮಗಳನ್ನು ಪರಿಷ್ಕರಿಸಿರುವ ಕುರಿತು.

*****

ವಿಶ್ವವಿದ್ಯಾನಿಲಯದಲ್ಲಿ ಈ ಹಿಂದೆ ಚಾಲ್ತಿಯಲ್ಲಿದ್ದ ಏಳು ಪರಿನಿಯಮಗಳ ಜೊತೆಗೆ ಹೊಸದಾಗಿ ಸ್ಥಾಪನೆಗೊಂಡಿರುವ ಮೂರು ಪೀಠಗಳ (ಡಾ. ಬಿ ವಿ. ಕಾರಂತ್, ಡಾ. ರಾಮ್‌ಮನೋಹರ ಲೋಹಿಯಾ ಹಾಗೂ ಕಾಮಧೇನು ಪೀಠ) ಪರಿನಿಯಮಗಳನ್ನು ರಚಿಸಿ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ದಿನಾಂಕ:05.10.2021 ರಂದು ಸರ್ಕಾರ ಮುಖಾಂತರ ಕಳುಹಿಸಿಕೊಡಲಾಗಿರುತ್ತದೆ.

ಮುಂದುವರೆದು, ಈ ಹಿಂದೆ ಮೂರು ಅಧ್ಯಯನ ಪೀಠಗಳ ಸ್ಥಾಪನೆ ಸಂಬಂಧವಾಗಿ ರಚಿಸಲಾಗಿದ್ದ ಕರಡು ಪರಿನಿಯಮಗಳಲ್ಲಿ ಅಳವಡಿಸಿಕೊಂಡಿರುವಂತೆ ಪರಿಷ್ಕೃತ ಪ್ರಸ್ತಾನೆಯನ್ನು ಸಲ್ಲಿಸುವಂತೆ ಸರ್ಕಾರದ ಅಧೀನ ಕಾರ್ಯದರ್ಶಿಗಳು ತಮ್ಮ ದಿನಾಂಕ: 25.05.2022 ರ ಪತ್ರದಲ್ಲಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸದರಿ ಮೂರು ಪೀಠಗಳ ಪರಿನಿಯಮಗಳಲ್ಲಿ ಅಳವಡಿಸಿಕೊಂಡಿರುವ ತಿದ್ದುಪಡಿಗಳನ್ನು, ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಡಾ. ಬಿ ವಿ. ಕಾರಂತ್, ಡಾ. ರಾಮ್‌ಮನೋಹರ ಲೋಹಿಯಾ ಹಾಗೂ ಕಾಮಧೇನು ಪೀಠಗಳ ಸ್ಥಾಪನೆ ಸಂಬಂಧ ರಚಿಸಲಾಗಿರುವ ಪರಿನಿಯಮಗಳಿಗೆ ಅಳವಡಿಸಿಕೊಂಡು ಅಗತ್ಯ ತಿದ್ದುಪಡಿಗಳೊಂದಿಗೆ ಸಿದ್ಧಪಡಿಸಲಾಗಿರುವ **"ಪರಿಷ್ಕೃತ ಪರಿನಿಯಮಗಳ"** ಕರಡು ಪ್ರತಿಗಳನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

**ಅನುಮೋದಿಸಲಾಯಿತು. ಕ್ರಿಯಾಯೋಜನೆಯನ್ನು**

ಅಂತಿಮವಾಗಿ 22ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಸಚಿವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಸಚಿವರು ಹಾಗು**
**ಸದಸ್ಯ ಕಾರ್ಯದರ್ಶಿಗಳು**

**ಕುಲಪತಿಗಳು ಹಾಗು ಅಧ್ಯಕ್ಷರು**